# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 65/2013

(ಫ್ರಾಸಾ-3 ಚಾಸಾ-2 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 02.02.2023

| | | |
|---|---|---|
| ಸಾಕ್ಷಿದಾರರ ಹೆಸರು | - | ಕುಮಾರ್ |
| ತಂದೆಯ ಹೆಸರು | - | ಗಂಗಣ್ಣ |
| ವಯಸ್ಸು | - | 44 ವರ್ಷ, |
| ಉದ್ಯೋಗ | - | ಚಾಲಕ |
| ವಾಸ | - | ತಲಘಟ್ಟಪುರ |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ-1 ದೀಪಕ್ ನನ್ನ ಸ್ನೇಹಿತ. ಆತ ಪರಿಶಿಷ್ಟ ಜಾತಿಯವನು. ಚಾಸಾ-3 ಚಂದ್ರ ಸಹ ನನ ಸ್ನೇಹಿತ. ಈಗ ಸುಮಾರು 13 ವರ್ಷಗಳ ಹಿಂದೆ ಮಧ್ಯಾಹ್ನ 1 ಘಂಟೆ ಸಮಯದಲ್ಲಿ ತಲಘಟ್ಟಪುರದ ಜ್ಞಾನಸ್ವೀಕಾರ ಶಾಲೆಯ ಹತ್ತಿರ ಟೆಂಪೋದಲ್ಲಿ ನಾನು ಮತ್ತು ಚಾಸಾ-3 ಚಂದ್ರ ಹೊರಟಿದ್ದೆವು. ಸದರಿ ಶಾಲೆಯ ಹತ್ತಿರ ಕನಕಪುರ ಮುಖ್ಯ ರಸ್ತೆಯಲ್ಲಿ ಗಲಾಟೆಯಾಗುತ್ತಿತ್ತು. ವಾಹನ ನಿಲ್ಲಿಸಿ ಹೋಗಿ ನೋಡಿದೆವು. ಸುಮಾರು ಹತ್ತು ಜನರು ಚಾಸಾ-1 ಈತನಿಗೆ ಹೊಡೆಯುತ್ತಿದ್ದರು. ನಾನು ತಕ್ಷಣ ತಲಘಟ್ಟಪುರ ಪೋಲಿಸ್ ಠಾಣೆಗೆ ಫೋನ್ ಮಾಡಿದೆ. ಪೋಲಿಸರು ಬಂದರು. ಆಗ ಹೊಡೆಯುತ್ತಿದ್ದವರು ಅಲ್ಲಿಂದ ಓಡಿ ಹೋದರು. ಅಂಬುಲೆನ್ಸ್ ಅನ್ನು ತರಿಸಿ ಚಾಸಾ-1 ಈತನನ್ನು ಕೋಣನಕುಂಟೆ ಆಸ್ಪತ್ರೆಗೆ ಕಳುಹಿಸಿಕೊಟ್ಟೆ . ಚಾಸಾ-1 ಈತನಿಗೆ ಹತ್ತು ಜನ ಹೊಡೆಯುತ್ತಿದ್ದರು, ಆದ್ದರಿಂದ ಎಲ್ಲರನ್ನು ಗುರ್ತಿಸಲು ಆಗುವುದಿಲ್ಲ. ಮೂರು ಜನರನ್ನು ತೋರಿಸಿದರೆ ಗುರ್ತಿಸಬಲ್ಲೆ. ಚಾಸಾ-1 ಈತನಿಗೆ ಹೊಡೆಯುತ್ತಿದ್ದವರ ಹೆಸರು ನನಗೆ ಗೊತ್ತಿಲ್ಲ. ಚಾಸಾ-1 ಈತನಿಗೆ ಹೊಡೆಯುತ್ತಿದ್ದವರನ್ನು ಈಗ ಸುಮಾರು ಒಂದು ವರ್ಷದ ಹಿಂದೆ ಒಂದು ಸಾರಿ ನ್ಯಾಯಾಲಯಕ್ಕೆ ಈ ಪ್ರಕರಣಕ್ಕೆ ಬಂದಾಗ ನ್ಯಾಯಾಲಯದ ಒಳಗೆ ನೋಡಿದ್ದೇನೆ. ಆ ರೀತಿ ನ್ಯಾಯಾಲಯದಲ್ಲಿ ನೋಡಿದ ಅವರಿಬ್ಬರು ಚಾಸಾ-1 ಈತನ ಊರಿನವರು.

(2 ರಿಂದ 4 ನೇ ಆರೋಪಿತರು ಈ ದಿನ ಗೈರು ಹಾಜರಿದ್ದು ಅವರ ಪರವಾಗಿ ವಿನಾಯಿತಿ ಅರ್ಜಿ ಸಲ್ಲಿಸಿದ್ದು ಅದನ್ನು ಮಾನ್ಯ ಮಾಡಲಾಗಿದೆ. ಆರೋಪಿತರ ಐಡೆಂಟಿಟಿಯನ್ನು ತಕರಾರು ಮಾಡುವುದಿಲ್ಲವೆಂದು ಆರೋಪಿ ಪರ ವಕೀಲರು ಸದರಿ ಅರ್ಜಿಯಲ್ಲಿ ತಿಳಿಸಿರುತ್ತಾರೆ. 1 ನೇ ಆರೋಪಿಯ ವಿರುದ್ಧ ಪ್ರಕರಣ ಬೇರ್ಪಡಿಸಲಾಗಿದೆ).

2. ನಾನು ನೋಡಿದಾಗ ಚಾಸಾ-1 ಈತನಿಗೆ ಕೈಗಳಿಂದ ಹೊಡೆಯುತ್ತಿದ್ದರು ಮತ್ತು ಕಾಲುಗಳಿಂದ ಒದೆಯುತ್ತಿದ್ದರು. ಹಲ್ಲೆ ಮಾಡುವವರು ಮತ್ತೆ ಯಾವುದರಿಂದ ಚಾಸಾ-1 ಈತನಿಗೆ ಹೊಡೆದಿದ್ದಾರೆಂದು ನಾನು ನೋಡಿಲ್ಲ. ಚಾಸಾ-1 ಈತನಿಗೆ ಆರೋಪಿತರು ಬೈದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ-1 ಈತನಿಗೆ ಹಲ್ಲೆ ಮಾಡಿದವರು ಟಾಟಾ ಸುಮೋ ವಾಹನದಲ್ಲಿ ಬಂದಿದ್ದರು. ಸದರಿ ವಾಹನವನ್ನು ತೋರಿಸಿದರೆ ಗುರ್ತಿಸಬಲ್ಲೆ. (ಸದರಿ ಟಾಟಾ ಸುಮೋ ವಾಹನವನ್ನು M/s. Janani Tours and Travels ಇವರ ಮಧ್ಯಂತರ ವಶಕ್ಕೆ ನೀಡಲಾಗಿದೆ, ಆದೇಶ ದಿಃ 07.01.2013. ಸದರಿ ವಾಹನವನ್ನು ಈ ದಿನ ಹಾಜರುಪಡಿಸಿಲ್ಲ. ಅದರ ಫೋಟೋಗಳನ್ನು ಸಹ ನ್ಯಾಯಾಲಯಕ್ಕೆ ಹಾಜರುಮಾಡಿಲ್ಲ). ಪೋಲಿಸರು ನನ್ನನ್ನು ವಿಚಾರಿಸಿಲ್ಲ.

3. ಈಗ ತೋರಿಸಿದ ಬಿಯರ್ ಬಾಟಲ್ ಗಳ ಚೂರುಗಳನ್ನು ನಾನು ಘಟನೆ ಸಮಯದಲ್ಲಿ ನೋಡಿಲ್ಲ. ಸಾಕ್ಷಿಗೆ ತೋರಿಸಿದ ಬಿಯರ್ ಬಾಟಲ್ ಚೂರುಗಳನ್ನು ಒಟ್ಟಾಗಿ ಮು.ಮಾ-1 ಎಂದು ಗುರ್ತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್‌ಪಿಪಿ ರವರು ವಿನಂತಿಸಿದ್ದರಿಂದ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

4. ಚಾಸಾ-1 ಈತ ಆಶಾಳನ್ನು ಪ್ರೀತಿಸಿ ಮದುವೆಯಾಗಿದ್ದ ಎಂದರೆ ನನಗೆ ಗೊತ್ತಿಲ್ಲ. ಹಲ್ಲೆ ಮಾಡಿದವರು ಆಶಾಳ ಸಂಬಂಧಿಕರು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಚಾಸಾ-1 ಈತನಿಗೆ ಮಾದಿಗ ನನ್ನ ಮಗನೇ ಎಂದು ಬೈದರು ಹಾಗೂ ಇವನನ್ನು ಬಿಡಬೇಡಿ,

ಸಾಯಿಸಿಬಿಡೋಣ ಎಂದು ಹೇಳಿದರು ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ ಅನೀಲ ದೊಣ್ಣೆಯಿಂದ ಚಾಸಾ-1 ಈತನ ತಲೆಗೆ ಹೊಡೆದ ಎಂದರೆ ನಾನು ನೋಡಿಲ್ಲ. 3 ನೇ ಆರೋಪಿ ಗೋಪಿ ಬಿಯರ್ ಬಾಟಲ್ ನಿಂದ ಚಾಸಾ-1 ಈತನ ಕುತ್ತಿಗೆಯ ಹತ್ತಿರ ಹೊಡೆದ ಎಂದರೆ ನಾನು ನೋಡಿಲ್ಲ. 2 ನೇ ಆರೋಪಿ ಸಂಪಣ್ಣಿ ಕೈಯಿಂದ ಚಾಸಾ-1 ಈತನ ಕಣ್ಣಿನ ಮೇಲೆ ಗುದ್ದಿದ ಎಂದರೆ ನಾನು ನೋಡಿಲ್ಲ. 4 ನೇ ಆರೋಪಿ ಕೈಯಿಂದ ಚಾಸಾ-1 ಈತನಿಗೆ ಹೊಡೆಯುತ್ತಿದ್ದ ಎಂದರೆ ನಾನು ನೋಡಿಲ್ಲ. ಎಲ್ಲಾ ಆರೋಪಿತರು ಚಾಸಾ-1 ಈತನಿಗೆ ನೀನು ನಮ್ಮ ಜಾತಿ ಕೆಡಿಸಿದ್ದೀಯಾ, ನಿನ್ನನ್ನು ಸಾಯಿಸದೇ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದರು ಎಂದರೆ ಗೊತ್ತಿಲ್ಲ. ಘಟನೆಯು ಎಂಎಸ್ ವೈನ್ಸ್ ಸ್ಟೋರ್ ಮುಂದೆ ಆಗಿದೆ ಎಂದರೆ ಸಾಕ್ಷಿದಾರರು ಅದು ಅಲ್ಲೇ ಪಕ್ಕದಲ್ಲಿ ಇದೆ ಎನ್ನುತ್ತಾರೆ. ಆರೋಪಿತರು ದೊಣ್ಣೆಯನ್ನು ತೆಗೆದುಕೊಂಡು ಟಾಟಾ ಸುಮೋದಲ್ಲಿ ಹೋದರು ಎಂದರೆ ನಾನು ನೋಡಿಲ್ಲ. ಈಗ ಓದಿ ಹೇಳಿದಂತೆ ನಿಪಿ-2 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಸಮಯ ಕೋರುತ್ತಾರೆ. ಸಕಾರಣ ಇಲ್ಲದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು